ಜಮಾತ್‌ನ್ನು ಎಂದು ಬೆಂಬಲಿಸಲಾರೆವು ಏಕೆಂದರೆ ಅವರು ನಮ್ಮ ರಾಷ್ಟ್ರಪಿತನನ್ನೇ ಸಾಯಿಸಿದ್ದಲ್ಲದೇ ಕೊಲೆಗಡುಕರಿಗೆ ಪುನರ್ವಸತಿಯನ್ನೂ ಕಲ್ಪಿಸಿದರು. ಬಿಎನ್‌ಪಿ ಮತ್ತು ಜಮಾತ್‌ನ್ನು ನಾವು ಎಂದಿಗೂ ಬೆಂಬಲಿಸಲಾರೆವು. ಆದರೆ ದುಃಖದ ಸಂಗತಿಯೆಂದರೆ ಆವಾಮಿ ಲೀಗ್ ಸರ್ಕಾರ ನಮ್ಮ ವಿರುದ್ಧವಿದೆ. ಸರ್ಕಾರಕ್ಕೆ ಇದೊಂದು ಅಧಿಕಾರದ ಆಟ ಅಷ್ಟೇ. ಜನರ ಬೆಂಬಲ ಮತ್ತು ವಿಶ್ವಾಸವನ್ನು ಪುನಃ ಗಳಿಸುವ ಸಲುವಾಗಿ ಆವಾಮಿ ಲೀಗ್ ಸರ್ಕಾರ ಎಲ್ಲ ತರಹದ ಕಸರತ್ತುಗಳನ್ನೂ ನಡೆಸುತ್ತಿದೆ. ಸೆಕ್ಯುಲರ್‌ವಾದಿಗಳು ಹಾಗೆಯೇ ಇಸ್ಲಾಮ್ ಮೂಲಭೂತವಾದಿಗಳು ಈ ಎರಡೂ ಪಕ್ಷದಲ್ಲಿ ಮಾತನಾಡಲು ಸರ್ಕಾರ ಪ್ರಯತ್ನ ನಡೆಸುತ್ತಿದೆ. ಹಿಫಾಜತ್ -ಎ-ಇಸ್ಲಾಮ್ ಮುಂತಾದ ಮೂಲಭೂತವಾದಿಗಳ ಬೆಳವಣಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಐಎಸ್‌ಐಎಸ್ ಬೆಳವಣಿಗೆಯೊಂದಿಗೆ ಹೊಂದಿಕೊಂಡಿದೆಯೇ ಎನ್ನುವುದು ನನಗೆ ಗೊತ್ತಿಲ್ಲ, ಆದರೆ ಬಾಂಗ್ಲಾದೇಶದಲ್ಲಿ ಐಎಸ್‌ಐಎಸ್ ಇರಬಹುದು ಎನ್ನುವುದನ್ನು ಸರ್ಕಾರ ಪದೇಪದೇ ನಿರಾಕರಿಸುತ್ತ ಬಂದಿದೆ. ಮತದ ಹೆಸರಿನಲ್ಲಿ ಉಗ್ರಗಾಮಿಗಳಾದ ಯಾರೇ ಆಗಲಿ ಇಡೀ ವಿಶ್ವದಲ್ಲಿ ಅವರೆಲ್ಲ ಒಂದೇ. ಭಾರತ ಸಂವಿಧಾನಾತ್ಮಕವಾಗಿ ಜಾತ್ಯಾತೀತ, ಆದ್ದರಿಂದ ನಾನು ಭಾರತವನ್ನು ಗೌರವಿಸುತ್ತೇನೆ. ಆದರೆ ಬಾಂಗ್ಲಾದೇಶದ ವಿಷಯದಲ್ಲಿ ಹೀಗೆ ಹೇಳಲು ಸಾಧ್ಯವಿಲ್ಲ, ಏಕೆಂದರೆ ಅದರ ರಾಷ್ಟ್ರೀಯ ಮತ ಇಸ್ಲಾಮ್.

## ಯಾರು ದೊಡ್ಡ ಬೆದರಿಕೆ- ಸರ್ಕಾರವೋ ಅಥವಾ ಇಸ್ಲಾಮ್ ಮೂಲಭೂತವಾದಿಗಳೋ?

ಇಬ್ಬರಿಂದಲೂ ನನಗೆ ಬೆದರಿಕೆ ಇದೆ. ನಾನು ಅಡಗಿಕೊಳ್ಳದೇ ಇದ್ದರೆ ಇಸ್ಲಾಮ್ ಮೂಲಭೂತವಾದಿಗಳು ನನ್ನನ್ನು ಸಾಯಿಸುತ್ತಾರೆ. ಒಂದೊಮ್ಮೆ ಇಸ್ಲಾಮ್ ಮೂಲಭೂತವಾದಿಗಳು ಏನೂ ಮಾಡದಿದ್ದರೆ ಸರ್ಕಾರ ಬಂದು ನನ್ನನ್ನು ಬಂಧಿಸುತ್ತದೆ.

**ಪಲಾಯನಗೈದಿರುವ ಬ್ಲಾಗರ್‌ಗಳ ಬಗ್ಗೆ ಹೇಳಲಾಗುವುದಿಲ್ಲ...**

ಇದು ರಹಸ್ಯದ ವಿಷಯ. ಸುರಕ್ಷತೆಯ ಕಾರಣದಿಂದ ನಾವು ಇದರ ಕುರಿತು ಮಾತನಾಡುವುದಿಲ್ಲ. ಇವರೆಲ್ಲರೂ ಇನ್ನೂ ದೇಶದಲ್ಲೇ ಇದ್ದಾರೆ ಎಂದು ಬಾಂಗ್ಲಾದೇಶದಲ್ಲಿ ಬಹುತೇಕ ಎಲ್ಲರೂ ವಿಚಾರ ಮಾಡುತ್ತಾರೆ. ಆದರೆ ವಾಸ್ತವದಲ್ಲಿ ಅವರು ಬೇರೆ ದೇಶದಲ್ಲಿ ಇರಬಹುದು. ಅವರು ದೇಶದಲ್ಲಿಲ್ಲ ಎಂದು ಅವರು ಹೇಳಿಕೊಳ್ಳುವ ಹಾಗಿಲ್ಲ ಏಕೆಂದರೆ ವಾಪಸ್ಸು ಬಂದ ಮೇಲೆ ಅವರು ಕೊಲೆಗೀಡಾಗಬಹುದು. ಅವರಿಗೆ ವೀಸಾ ಸಮಸ್ಯೆಯಾಗಬಹುದು. ಇನ್ನೂ ಅನೇಕ ತೊಂದರೆ ಆಗಬಹುದು. ಕನಿಷ್ಠ 15 ಯುವಕಯುವತಿಯರು ದೇಶ ಬಿಟ್ಟು ಹೋಗಿದ್ದಾರೆ.

## ಭಾರತದಲ್ಲಿ ಆಶ್ರಯ ಕೋರವ ಬಗ್ಗೆ ಇನ್ನೂ ಚಿಂತಿಸಿಲ್ಲ...

ಇಲ್ಲ, ನಾನು ಆಶ್ರಯ ಅಥವಾ ಇನ್ನ್ಯಾವುದರ ಬಗ್ಗೆ ಯೋಚಿಸಿಲ್ಲ. ನಾನು ನನ್ನ ದೇಶವನ್ನು ನಿಜವಾಗಿ ಪ್ರೀತಿಸುತ್ತೇನೆ. ನನ್ನ ತಂದೆತಾಯಿಗಳು ಅಲ್ಲಿದ್ದಾರೆ, ನಾನು ಹೋಗಿ ಅವರನ್ನು ನೋಡಬೇಕು. ನಾನು ಇನ್ನೊಂದು ದೇಶದಲ್ಲಿ ಆಶ್ರಯ ಪಡೆದರು ಅದು ಸಾಧ್ಯವಿಲ್ಲ. ನನ್ನ ಪತ್ನಿಯ ಕುರಿತೂ ನಾನು ವಿಚಾರ ಮಾಡಬೇಕು. ಬದುಕು ಎಲ್ಲಕ್ಕಿಂತ ಹಿರಿದು, ಎಲ್ಲರೂ ಬದುಕಲು ಬಯಸುತ್ತಾರೆ. ನನ್ನಂತೆಯೆ ಇನ್ನೂ ಅನೇಕರಿದ್ದಾರೆ, ಅವರು ಅದೃಷ್ಟವಂತರು ಅವರು ಜೀವಂತವಿದ್ದಾರೆ, ನಾನೂ ಜೀವಂತವಿದ್ದೇನೆ ಎನ್ನುವ ಕಾರಣಕ್ಕೆ ಅದೃಷ್ಟವಂತ. ಸಾವಿನ ಭಯದೊಂದಿಗೆ, ಯಾವುದೇ ಸಮಯದಲ್ಲಿ ಕೊಲೆಗೀಡಾಗಬಹುದು ಎನ್ನುವ ಭಯದೊಂದಿಗೆ ಬದುಕುವುದು ಸಾಧ್ಯವಿಲ್ಲ. ಒಮ್ಮೆ ಊಹಿಸಿಕೊಳ್ಳಿ, ನೀವು ಊಟಮಾಡುತ್ತಿರುವಾಗ ಯಾರೋ ಬಾಗಿಲನ್ನು ಬಡಿಯುತ್ತಾರೆ, ಅದು ಓರ್ವ ಭಿಕ್ಷುಕನೇ ಇರಬಹುದು, ಆದರೆ ನೀವು ಭಯಗ್ರಸ್ತರಾಗುತ್ತೀರಿ. ಇಂತಹ ಹೆದರಿಕೆಯೊಂದಿಗೆ ಹೆಚ್ಚು ಕಾಲ ಬದುಕುವುದು ಕಷ್ಟ. ಏನಾಗುವುದೋ ನನಗೆ ಗೊತ್ತಿಲ್ಲ.

**ಅನುವಾದ : ಸತ್ಯನಾರಾಯಣ ಶಾನುಭೋಗ್**

## ಮೂಲಭೂತವಾದಿಗಳು ಮತ್ತು ಇಸ್ಲಾಮ್‌ವಾದಿಗಳ ಪ್ರಕಾರ ನಾಸ್ತಿಕರೆಂದರೆ ಯಾರು?

ನನಗನ್ನಿಸುತ್ತದೆ ಯಾವುದೇ ಮತವನ್ನು ನಂಬದೇ ಇರುವವರು ಅವರ ಪ್ರಕಾರ ನಾಸ್ತಿಕರು. ಇಸ್ಲಾಮ್‌ವಾದಿಗಳು ಈ ವ್ಯಾಖ್ಯಾನವನ್ನು ಇನ್ನೂ ಬಿಗಿಗೊಳಿಸಿದ್ದಾರೆ. ಅವರ ಪ್ರಕಾರ ಜಾತ್ಯಾತೀತತೆಯ ಕುರಿತು ಮಾತನಾಡುವವರೆಲ್ಲ ನಾಸ್ತಿಕರು. ಮತಗಳನ್ನು ಅನುಸರಿಸುತ್ತ ಜಾತ್ಯಾತೀತತೆಯನ್ನು ಪ್ರತಿಪಾದಿಸುವ ಅನೇಕರನ್ನು ನಾವು ಕಾಣಬಹುದು. ಮತೀಯ ಸಮಾನತೆಯನ್ನು ಅವರು ಬಯಸುತ್ತಾರೆ, ದೇಶ ಜಾತ್ಯಾತೀತ ರಾಷ್ಟ್ರವಾಗಬೇಕೆನ್ನುವುದು ಅವರ ಇಚ್ಛೆಯಾಗಿದೆ. ಇಸ್ಲಾಮ್‌ವಾದಿಗಳ ಪ್ರಕಾರ ಇಂಥವರೂ ಸಹ ನಾಸ್ತಿಕರು.



